## ಅಭಿಯಾಚನೆ ಕ್ರಮಾಂಕ 30— ಜನಾರೋಗ್ಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೬೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ, ೨೦,೦೫,೮೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

### ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು.

ಅಧ್ಯಕ್ಷರು.—ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೪೪೩(೯೧೨) ಸದಸ್ಯರು ಗೈರುಹಾಜರಿ, ಮುಂದಿನ ಪ್ರಶ್ನೆ ಕ್ರಮಾಂಕ ೪೪೪(೯೩೬).

### ಕೃಷ್ಣರಾಜ ಟೌನಿನಲ್ಲಿ ಸೇಂದಿ ಸೇವನೆಯಂ ನಂತರ ಮೃತಪಟ್ಟಿರುವುದು.

೯೩೬. ಶ್ರೀ ಎಸ್. ನಂಜಪ್ಪ(ಕೆ. ಆರ್. ನಗರ).—ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

೧) ಕಳೆದ ಒಂದು ವರ್ಷದಿಂದ ಕೃಷ್ಣರಾಜನಗರ ಟೌನ್‌ನಲ್ಲಿ ಸೇಂದಿ ಸೇವನೆಯಿಂದ ಐದು ಜನ ಮೃತಪಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ತನಿಖೆ ಏನಾದರೂ ನಡೆದಿದೆಯೇ ?

೨) ಹಾಗಿಲ್ಲದಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ರಮೇಶ ಜಿಗಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

೧) ಬಂದಿರುವುದಿಲ್ಲ,

೨) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಬಕಾರಿ ರಾಜ್ಯ ಸಚಿವರ ಪರವಾಗಿ ಕೈಗಾರಿಕಾ ಮಂತ್ರಿ ಜೆ. ಎಚ್. ಪಟೇಲ್‌ರವರು ಉತ್ತರಿಸಿದರು.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದೇ ತರಹದ ಉತ್ತರವನ್ನು ಕೊಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆನು. ಯಾಕೆಂದರೆ ಸತ್ತವರ ಬಗ್ಗೆ ಯಾರೂ ದೂರು ಕೊಟ್ಟಿಲ್ಲ. ಪೋಸ್ಟ್‌ಮಾರ್ಟಮ್ ಆಗಿಲ್ಲ. ಆದರೆ ಈ ದುರಂತದ ಬಗ್ಗೆ ವಿವರವಾದ ಲೇಖನಗಳು ಪತ್ರಿಕೆಗಳಲ್ಲಿ ಸ್ಥಳೀಯ ಪತ್ರಿಕೆಗಳಲ್ಲಿ ಬಂದಿವೆ. ಮೈಸೂರಿನಲ್ಲಿ ೫೦ ಸಾವಿರಕ್ಕಿಂತಲೂ ಹೆಚ್ಚು ಪತ್ರಿಕೆಗಳು ಮಾರಾಟ ವಾಗುವ ಪತ್ರಿಕೆಯಾದ ಆಂದೋಲನ ಪತ್ರಿಕೆಯಲ್ಲಿ ವಿವರಗಳು ಬಂದಿವೆ. ಇದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ ದಯವಿಟ್ಟು ತನಿಖೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರು ಇದರ ಬಗ್ಗೆ ವಿವರಗಳನ್ನು ತಿಳಿಸಿದರೆ, ವಸ್ತು ಸ್ಥಿತಿ ನಿಜವಾಗಿದ್ದಲ್ಲಿ, ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿಯವರೆಗೆ, ಎಕ್ಸೈಜ್‌ನವರಿಗಾಗಲೀ, ಪೋಲೀಸನವರಿಗಾಗಲೀ ಯಾವ ಒಂದು ಕಂಪ್ಲೈಂಟ್ ಬಂದಿಲ್ಲ—ಎಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಕ್ರಮಾಂಕ. ೪೪೫ (೯೪೩)

ಸದಸ್ಯರ ಗೈರುಹಾಜರು.

ಪ್ರಶ್ನೆ ಕ್ರಮಾಂಕ. ೪೪೬ (೧೦೭೨)

ಸದಸ್ಯರ ಗೈರುಹಾಜರು.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ.—೪೪೭(೧೦೦೩)